ಫಿನಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಪೆಂಜರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ಯಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯೆನ್ನು ಪಾವತೀ ಮಾಡುವ ಬಗ್ಗೆ ಆವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಪೆಂಜರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟಪಟ್ಟಳ್ಳ ಜನಗಳು ತಮ್ಮ ಡಿಪೆಂಜರ್‌ಗಳನ್ನು ಎಷ್ಟೇನ್ಸೆಮೆಂಟ್ ಯಾನೇ ಪರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಪ್ಯೂಪ್ಲಿಕೇಟಾದ ಡಿವಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಷ್ಟೇನ್ಸೆಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಪಿ. ಹಡಿರ್ಣ,
ಕಾಂಪ್ಟ್ರೋಲರ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್‌ಜಡ್ಜೀಯವರ ಕೋರ್ಟಿನಲ್ಲಿ.

1885ನೇ ಇಸವಿ ಅರ್ಜೀ ನಂಬರ್ 166.

ಮೃತಪಟ್ಟ ಮಾಗಡಿ ತಾಲ್ಲೂಕು ಸಾತನೂರು ಹೋಬಳಿ ಬಸವನಗುಡಿ ಪಾಳ್ಯದ ಚಿಕ್ಕ ಕೊಟ್ಟಗನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ ದೊಡ್ಡ ಕೊಟ್ಟಗ ಗೌಡನು ಮೃತಪಟ್ಟ ಸದರೀ ಚಿಕ್ಕ ಕೊಟ್ಟಗನಿಗೆ ಅಂಣನಾಗಬೇಕೆಂಬ ಹಕ್ಕುದಾರೀ ಮೇಲೆ ಮೇಲ್ಕಂಡ ಬಸವನಗುಡಿ ಸ್ಥಳದ ದೊಡ್ಡಕೊಟ್ಟಗ ಗೌಡನು, ಸದರೀ ಬಸವನಗುಡಿ ವಾಸಸ್ಥನಾಗಿ ಮೃತಪಟ್ಟ ಚಿಕ್ಕಕೊಟ್ಟಗನ ಜಿಂದಗಿ ಬಾಬ್ತಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರೆಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಐಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ದೊಡ್ಡಕೊಟ್ಟಗ ಗೌಡನ ಅರ್ಜೀಯನ್ನು 1885ನೇ ಇಸವಿ ಜುಲೈ ತಿಂಗಳು 14ನೇ ತಾರೀಖಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬುದ್ಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕಕೊಟ್ಟಗನ ಆಸ್ತಿಗೆ ಹಕ್ಕುದಾರರಾದ ವಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1885ನೇ ಇಸವಿ ಜುಲೈ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಕ್ರೇಸ್,
ಸಬ್ ಜಡ್ಜ್.

ತಾರೀಖು 4ನೇ ಜುಲೈ 1885.

ಬೆಂಗಳೂರಲ್ಲಿರುವ ಮೈಸೂರು ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನ ಡಿಪಾಜಿಟ್‌ದಾರರುಗಳಿಗೆ ಇದರಿಂದ ಕೇಳಿಕೊಳ್ಳುವದೇನಂದರೆ, 1885ನೇ ಇಸವಿ ಮಾರ್ಚಿ 31ನೇ ಮುಕ್ತಾಯವರಿಗೆ ಆಗುವ ಬಡ್ಡಿಯನ್ನು ಪೈಸಲ್ ಮಾಡುವ ಬಗ್ಗೆ ಅವರವರ ಪ್ಯಾಸ್ ಬುಕ್ಕುಗಳನ್ನು ಬೆಂಗಳೂರು ಡಿಸ್ಟ್ರಿಕ್ಟು ಖಜಾನೆಯಲ್ಲಿ ಹಾಜರ್ಮಾಡತಕ್ಕದ್ದು.

ಇ. ಸಿ. ಷಣ್ಮುಗವೇಲುಪಿಳ್ಳೆ,
ಟ್ರೆಜರೀ ಆಫೀಸರ್.